ಅಸಲು ದಾವಾ ಸಂಖ್ಯೆ - 201/2022
ಪಿಡಬ್ಲ್ಯೂ - 01
ದಿನಾಂಕಃ 13.07.2023
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆ - ಶ್ರೀ ಪಿ ಬಿ ಹೆಚ್ ವಕೀಲರಿಂದ.**

ಈ ದಾವೆಯಲ್ಲಿ ನಾನು ವಾದಿಯಾಗಿದ್ದು ಇಂದು ನಾನು ನನ್ನ ಮೌಖಿಕ ಸಾಕ್ಷ್ಯದ ಬದಲು ಈ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ. ಇದರಲ್ಲಿ ಬರೆದ ಎಲ್ಲ ವಿಷಯ ನಿಜ ಮತ್ತು ಸರಿ ಇದ್ದು ನನಗೆ ಗೊತ್ತಿದೆ.

ನಾನು ಈ ಕೆಳಕಂಡ ದಸ್ತಾವೇಜುಗಳನ್ನು ಹಾಜರು ಪಡಿಸಿದ್ದೇನೆ.

ನಾಯಿಕೆರೂರು ಗ್ರಾಮದ ಸರ್ವೆ ನಂ.96*/6, 96*/9 ಇವುಗಳ ಪಹಣಿ ಹಾಜರುಪಡಿಸಿದ್ದು ಅವುಗಳನ್ನು ನಿಪಿ-1 ಮತ್ತು 2 ಅಂತಾ ಗುರುತಿಸಲಾಯಿತು.

ಹೊನ್ನಿಕೊಪ್ಪ ಗ್ರಾಮದ ವ್ಹಿಪಿಸಿ ನಂ.60, 60/1, ಇವುಗಳ ತೆರಿಗೆ ಬೇಡಿಕೆ ರಿಜಿಸ್ಟರನ ಯಾದಿಯ ದೃಡಿಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-3 ಮತ್ತು 4 ಅಂತಾ ಗುರುತಿಸಲಾಯಿತು.

ರಾಮಗೇರಿ ಗ್ರಾಮದ ಆಸ್ತಿ ನಂ.545/4/2ಬ ಇದರ ಭೂ ಆಕರಣೆಯಾದಿಯ ದೃಡಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-5 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು